ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಕೆ. ಸುಧೀಂದ್ರರಾವ್

ಶ್ರೀಮತಿ ಬಿ.ಕೆ. ಪದ್ಮಾವತಿ ಹಾಗೂ ಇತರರು -ವಿರುದ್ಧ-ಶ್ರೀ ಬಿ.ಕೆ. ಗಣೇಶ್ ಹಾಗೂ ಇತರರು

ಆರ್.ಎಫ್.ಎ.ಸಂಖ್ಯೆ: 1582/2010 ಇದರೊಂದಿಗೆ ಇತರೆ, ದಿನಾಂಕ 10 ನೇ ಅಕ್ಟೋಬರ್, 2019.

ತೀರ್ಪು

ನ್ಯಾಯಮೂರ್ತಿ ಶ್ರೀ ಎನ್.ಕೆ. ಸುಧೀಂದ್ರರಾವ್:

ವಾದಿಗಳು ಹಾಗೂ 2 ನೇ ಹಾಗೂ 3 ನೇ ಪ್ರತಿವಾದಿಗಳು ಸಲ್ಲಿಸಿದ ಈ ಎರಡು ಅಪೀಲುಗಳನ್ನು, ಮಾನ್ಯ ಪ್ರಥಮ ಹೆಚ್ಚುವರಿ ನಗರ ಸಿವಿಲ್ ಹಾಗೂ ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ, ಇವರು ಒಎಸ್ಸಂಖ್ಯೆ: 7651/1999 ರಲ್ಲಿ ಹೊರಡಿಸಿದದಿನಾಂಕ: 06.01.2009 ರ ತೀರ್ಪಿನ ಹಾಗು ಡಿಕ್ರಿಯ ವಿರುದ್ಧ ಹೂಡಲಾಗಿದೆ.

2. ಗೊಂದಲ ಹಾಗೂ ಅತಿ ವ್ಯಾಪನೆಯನ್ನು ನಿವಾರಿಸುವ ಸಲುವಾಗಿ ಇದರಲ್ಲಿನ ಪಕ್ಷಕಾರರನ್ನು, ಅಧಿವಿಚಾರಣಾ ನ್ಯಾಯಾಲಯದಲ್ಲಿದ್ದಂಥ ಅವರವರ ದರ್ಜೆಗನುಸಾರವಾಗಿ ಉಲ್ಲೇಖಿಸಲಾಗಿದೆ.

3. ಮೂಲ ದಾವೆಸಂಖ್ಯೆ: 7651/1999 ರಲ್ಲಿ ( 1) ಶ್ರೀಮತಿ ಬಿ.ಕೆ. ಪದ್ಮಾವತಿ; ( 2) ಶ್ರೀಮತಿ ಬಿ.ಕೆ. ನಾಗಲಕ್ಷ್ಮಿ; ( 3) ಶ್ರೀಮತಿ ಬಿ.ಕೆ. ಗಾಯತ್ರಿ; ( 4) ಶ್ರೀಮತಿ ಬಿ.ಕೆ. ಸುಬ್ಬಲಕ್ಷ್ಮಿ ಎ್ರ ಹಾಗೂ ( 5) ಶ್ರೀ ತೇಜಸ್ವಿ ರಘು ಇವರು, ' ಎ ' ಹಾಗೂ ' ಬಿ ' ದಾವಾ ಅನುಸೂಚಿ ಸ್ವತ್ತುಗಳ ವಿಭಾಗ ಹಾಗೂ ಪ್ರತ್ಯೇಕ ಸ್ವಾಧೀನಕ್ಕಾಗಿ ದಾವೆಯನ್ನು ಹೂಡಿದ್ದಾರೆ.

66 " ಎ " ಅನುಸೂಚಿತ ಸ್ವತ್ತಿನ ಬಾಬು ಸಂ .1 ಇದು,ಸಂಖ್ಯೆ: 305, 10 ನೇ ಮುಖ್ಯ ರಸ್ತೆ, 3 ನೇ ಬ್ಲಾಕ್, ಜಯನಗರ, ಬೆಂಗಳೂರು -11 ಈ ಸಂಖ್ಯೆಯನ್ನು ಹೊಂದಿರುವ ವಾಸದ ಮನೆಯಾಗಿದ್ದು, ಶ್ರೀ ರಾಮಸ್ವಾಮಿಯವರ ಸ್ವತ್ತಿನಿಂದ ಉತ್ತರಕ್ಕೆ 60 ' x 40 ' ಅಡಿ ನಿವೇಶನದಲ್ಲಿ ಕಟ್ಟಲಾಗಿದೆ.ದಕ್ಷಿಣಕ್ಕೆ ಶ್ರೀ ಶಿವರಾಮ್ ಅಯ್ಯರ್ರವರ ಸ್ವತ್ತು; ಪೂರ್ವಕ್ಕೆ ಖಾಸಗಿ ಸ್ವತ್ತು ಹಾಗೂ ಪಶ್ಚಿಮಕ್ಕೆ ಬೆಂಗಳೂರಿನ ಜಯನಗರದ 10 ನೇ ಮುಖ್ಯರಸ್ತೆ.(ಮುಖ್ಯ ಮನೆಯನ್ನು 10 ರಿಂದ 11 ಚದರಗಳ ಪ್ರದೇಶದಲ್ಲಿ ಕಟ್ಟಲಾಗಿದ್ದು 2 ಚದರದ ಔಟ್ಹೌಸ್ ಇದೆ.)

' ಎ ' ದಾವಾ ಸ್ವತ್ತಿನ 2 ನೇ ಸಂಖ್ಯೆಯ ಬಾಬು ಮೂರು ನಿವೇಶನಗಳನ್ನು ಒಳಗೊಂಡಿದೆ ಎಂದರೆ:

| | | |
|---|---|---|
| ( ಎ ) | ಏಕಲವ್ಯ ನಗರದಲ್ಲಿ ನಿವೇಶನ ( ಖಚಿತವಾದ ಸ್ಥಳ ತಿಳಿದುಬಂದಿಲ್ಲ ) | 30 ' x 40 ' |
| ( ಬಿ ) | ಸಾರ್ವಭೌಮನಗರದಲ್ಲಿ ನಿವೇಶನ (ಖಚಿತವಾದ ಸ್ಥಳ ತಿಳಿದುಬಂದಿಲ್ಲ) | 30 ' x 40 ' |
| ( ಸಿ ) | ಕೃಷ್ಣರಾಜಪುರಂನಲ್ಲಿ ನಿವೇಶನ ( ಖಚಿತವಾದ ಸ್ಥಳ ತಿಳಿದುಬಂದಿಲ್ಲ ) | 30 ' x_40 ' ಎರಡು ನಿವೇಶನ |

' ಬಿ ' ದಾವಾ ಸ್ವತ್ತು ಒಟ್ಟಾರೆಯಾಗಿ, ಮನೆ ಸಾಮಾನುಗಳು, ಚಿನ್ನಾಭರಣಗಳು, ಬೆಳ್ಳಿ ಸಾಮಾನುಗಳು, ಬ್ಯಾಂಕ್ ಠೇವಣಿಗಳು ಹಾಗೂ ಉಳಿತಾಯ ಖಾತೆಗಳು, ಚಿಟ್ ಫಂಡ್ಗಳು, ಷೇರುಗಳು, ಕೆನರಾ ಬ್ಯಾಂಕ್ನಲ್ಲಿರುವ ಪಿಂಚಣಿ ಖಾತೆ ಹಾಗೂ ಮೌಲ್ಯಯುತ ವಸ್ತುಗಳನ್ನು ಒಳಗೊಂಡಂತೆ ಆರು ಚರಾಸ್ತಿ ಬಾಬುಗಳನ್ನು ಒಳಗೊಂಡಿದೆ;

4. ವಾದಿಗಳು ಹೂಡಲಾದ ದಾವೆಯಲ್ಲಿ ಅವರು, 1 ರಿಂದ 3 ರ ವರೆಗಿನ ಪ್ರತಿಯೊಬ್ಬ ಪ್ರತಿವಾದಿಗಳ ಪಾಲಿನ ಸದರಿ ಸ್ವತ್ತಿನ ಮೌಲ್ಯವನ್ನು ಒಪ್ಪಿಕೊಂಡಿದ್ದು ಪ್ರತಿಯೊಬ್ಬರಿಗೆ ಎಲ್ಲಾ ದಾವಾ ಸ್ವತ್ತಿನಲ್ಲಿ 1/8 ಭಾಗದ ಪಾಲನ್ನು ಕೋರಿದ್ದಾರೆ.

5. ವಾದಿಗಳ ವಾದ ಏನೆಂದರೆ, 1 ರಿಂದ 4 ರ ವರೆಗಿನ ವಾದಿಗಳು ಎಂದರೆ, ಬಿ.ಕೆ. ಪದ್ಮಾವತಿ, ಬಿ.ಕೆ.ನಾಗಲಕ್ಷ್ಮಿ, ಎ?ಬಿ.ಕೆ. ಗಾಯತ್ರಿ, ಬಿ.ಕೆ. ಸುಬ್ಬಲಕ್ಷ್ಮಿ ಹಾಗೂ ಬಿ.ಕೆ. ನಾಗರತ್ನ ಇವರುಗಳು ದಿವಂಗತ ಬಿ.ಆರ್. ಕೃಷ್ಣಮೂರ್ತಿ ರಾವ್ರವರ ಹೆಣ್ಣು ಮಕ್ಕಳು.5 ನೇ ಸಂಖ್ಯೆಯ ವಾದಿ-ತೇಜಸ್ವಿ ರಘು ಎಂಬುವವರು ದಿವಂಗತ ಕೃಷ್ಣಮೂರ್ತಿ ರಾವ್ ರವರ ಈ ಮೊದಲೇ ಮೃತರಾಗಿರುವ ಶ್ರೀಮತಿ ಬಿ.ಕೆ. ನಾಗರತ್ನರವರ ಮಗನಾಗಿದ್ದು, ಸದರಿ ನಾಗರತ್ನ ಮೃತರಾಗಿರುವುದರಿಂದ, 5 ನೇ ವಾದಿ ತೇಜಸ್ವಿ ರಘು ಪಾಲಿನಲ್ಲಿ ಅವಳ ಹಕ್ಕನ್ನು ಪ್ರತಿನಿಧಿಸಿದ್ದಾನೆ.

6. ಪ್ರತಿವಾದಿಗಳಾದ ( 1) ಬಿ.ಕೆ. ಗಣೇಶ್; ( 2) ಬಿ.ಕೆ. ಶ್ರೀನಿವಾಸ್ ಹಾಗೂ ( 3) ಬಿ.ಕೆ. ವೆಂಕಟೇಶ್ ಇವರುಗಳು ದಿವಂಗತ ಬಿ.ಆರ್. ಕೃಷ್ಣಮೂರ್ತಿ ರಾವ್ರವರ ಗಂಡುಮಕ್ಕಳಾಗಿದ್ದಾರೆ.ಕೇಂದ್ರ ಸರ್ಕಾರದ ಅಡಿಯಲ್ಲಿ ಲೆಕ್ಕಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸದರಿ ಬಿ.ಆರ್. ಕೃಷ್ಣಮೂರ್ತಿರಾವ್ ರವರಿಗೆ ಸೇರಿದ ' ಎ ' ದಾವಾ ಸ್ವತ್ತು (ಎರಡು ಬಾಬು) ಹಾಗೂ ' ಬಿ ' ದಾವಾ ಸ್ವತ್ತು ( 6 ಬಾಬು) ಗಳನ್ನು ದಾವಾ ಅನುಸೂಚಿ ಸ್ವತ್ತು ಒಳಗೊಂಡಿದೆ.ಅವರು ಮೃತರಾಗಿದ್ದು, 1 ರಿಂದ 4 ರ ವರೆಗಿನ ವಾದಿಗಳನ್ನು ಹಾಗೂ 1 ರಿಂದ 3 ರ ವರೆಗಿನ ಪ್ರತಿವಾದಿಗಳನ್ನು ಅಗಲಿರುತ್ತಾರೆ.ತಮ್ಮ ಮಗಳಾದ ಬಿ.ಕೆ. ನಾಗರತ್ನ ಎಂಬುವಳು ಮೊದಲೇ ಮೃತಳಾಗಿದ್ದು, ಅವಳ ಮಗನು 5 ನೇ ಸಂಖ್ಯೆಯ ವಾದಿಯಾಗಿರುತ್ತಾನೆ.

7. 1 ರಿಂದ 4 ರ ವರೆಗಿನ ವಾದಿಗಳಿಗೆ ಒಡಹುಟ್ಟಿದವರಾಗಿರುವ 1 ರಿಂದ 3 ರ ವರೆಗಿನ ಪ್ರತಿವಾದಿಗಳು ಹಾಗೂ 5 ನೇ ಸಂಖ್ಯೆಯ ವಾದಿಯ ಚಿಕ್ಕಪ್ಪನು ಹಾಜರಾಗಿ, ಲಿಖಿತ ಹೇಳಿಕೆಗಳನ್ನು ದಾಖಲು ಮಾಡಿದ್ದಾರೆ.1 ಹಾಗೂ 2 ನೇ ಸಂಖ್ಯೆಯ ಪ್ರತಿವಾದಿಗಳು ಪ್ರತ್ಯೇಕವಾಗಿ ತಮ್ಮ ಲಿಖಿತ ಹೇಳಿಕೆಗಳನ್ನು ದಾಖಲಿಸಲು ಅಪೇಕ್ಷಿಸಿದ್ದಾರೆ.3 ನೇ ಪ್ರತಿವಾದಿಯು 1 ಹಾಗೂ 2 ನೆಯ ಪ್ರತಿವಾದಿಗಳು ದಾಖಲಿಸಿದ ಲಿಖಿತ ಹೇಳಿಕೆಯನ್ನೇ ಆಯ್ಕೆ ಮಾಡಿಕೊಂಡಿದ್ದಾನೆ.

8. ವಾದಿಗಳು ಹಾಗೂ ಪ್ರತಿವಾದಿಗಳು, ದಿವಂಗತ ಬಿ.ಆರ್. ಕೃಷ್ಣಮೂರ್ತಿ ನಡುವೆ ಇದ್ದ ಪಿತೃತ್ವದ ಸಂಬಂಧದಲ್ಲಿ ' ಎ ' ಅನುಸೂಚಿ ಸ್ವತ್ತುಗಳಲ್ಲಿ 1 ನೇ ಬಾಬಿನ ಮಾಲೀಕತ್ವ ಹಾಗೂ ಸ್ವಾಧೀನತೆ, ಶ್ರೀ ಬಿ.ಅರ್. ಕೃಷ್ಣಮೂರ್ತಿಯವರು ತಮ್ಮ ಜೀವಿತಾವಧಿಯಲ್ಲಿ ಸದರಿ ಸ್ವತ್ತನ್ನು ವಿಲೇವಾರಿ ಮಾಡದೇ ಇರುವಂಥ ಹಲವಾರು ವಿಷಯಗಳಲ್ಲಿ ಪ್ರತಿವಾದಿಗಳಿಗೆ ಗಮನಾರ್ಹವಾದ ವಿವಾದವಿಲ್ಲದಿರುವ ಕುರಿತಂತೆ ವಾದಿಗಳ ವಾದಗಳನ್ನು, ಲಿಖಿತ ಹೇಳಿಕೆಗಳ ಸಾರಾಂಶವು ದೃಢಪಡಿಸುತ್ತದೆ.ಕೂಡು ಕುಟುಂಬದ ಬಗ್ಗೆ ಅಥವಾ ಕೂಡು ಪಾಲಿಗೆ ಸಂಬಂಧಿಸಿದಂತೆ ಕ್ಲೇಮು ಮಾಡುವುದಾಗಲಿ ಅಥವಾ ವಾದಿಸುವುದಾಗಲಿ ಎರಡೂ ಪಕ್ಷಕಾರರಿಗೆ ವಿಷಯವಲ್ಲ.ಆದಾಗ್ಯೂ, ಕ್ರಮವಾಗಿ ಏಕಲವ್ಯ ನಗರ, ಸಾರ್ವಭೌಮ ನಗರ ಹಾಗೂ ಕೃಷ್ಣರಾಜಪುರಂನಲ್ಲಿವೆಯೆಂದು ಹೇಳಲಾಗಿರುವ ಮೂರು ಖಾಲಿ ನಿವೇಶನಗಳನ್ನು ಒಳಗೊಂಡಿರುವ ' ಎ '

ಅನುಸೂಚಿ ಸ್ವತ್ತಿನ 2 ನೇ ಸಂಖ್ಯೆಯ ಬಾಬಿನ ಸಂಬಂಧದಲ್ಲಿ ಪಕ್ಷಕಾರರ ನಡುವೆ ವಿವಾದವಿದೆ.ಸಮಾನವಾಗಿ ' ಬಿ ' ದಾವಾ ಸ್ವತ್ತುಗಳು. 'ಎ ' ಅನುಸೂಚಿ ಸ್ವತ್ತಿನ 2 ನೇ ಸಂಖ್ಯೆಯ ಬಾಬು ಹಾಗೂ ' ಬಿ ' ಅನುಸೂಚಿ ಸ್ವತ್ತುಗಳ 1 ರಿಂದ 6 ರ ವರೆಗಿನ ಸಂಖ್ಯೆಯ ಬಾಬುಗಳು, ಪ್ರತಿವಾದಿಗಳ ಪ್ರಕಾರ, ಅಷ್ಟೇನೂ ಇಲ್ಲದಿದ್ದುದರಿಂದ, ತಂದೆಯವರಾದ ದಿವಂಗತ ಶ್ರೀ ಬಿ.ಆರ್. ಕೃಷ್ಣಮೂರ್ತಿರಾವ್ರವರ ಒಡೆತನದಲ್ಲಿದ್ದವು.

9. ಗೃಹೋಪಯೋಗಿ ವಸ್ತುಗಳು, ಕೆಲವು ಅಮೂಲ್ಯ ವಸ್ತುಗಳು, ಷೇರುಗಳು ಹಾಗೂ ' ಬಿ ' ಅನುಸೂಚಿ ಬಾಬಿನ ಇತರೆ ವಸ್ತುಗಳ ಮಟ್ಟಿಗೆ ಗಣನೀಯವಾಗಿ ತಕರಾರು ಮಾಡಿರುವುದಿಲ್ಲ ಅಥವಾ ಗಂಭೀರವಾಗಿ ತೆಗೆದುಕೊಂಡಿರುವುದಿಲ್ಲ.

10. ವಿಷಯವನ್ನು ಮಾನ್ಯ ಮೊದಲ ಹೆಚ್ಚುವರಿ ನಗರ ಸಿವಿಲ್ ಹಾಗೂ ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ-ಇವರು ಅಧಿವಿಚಾರಣೆ ನಡೆಸಿ ವಿಲೆ ಮಾಡಿರುತ್ತಾರೆ.ಇದರಲ್ಲಿ ರೂಪಿಸಲಾದ ಸುಸಂಗತ ವಿವಾದಾಂಶಗಳು, 1/ 8 ರ ಪಾಲಿನ ಸಹ ಒಡೆತನ, ಹಕ್ಕಿಗೆ ಹಾಗೂ ಆಸ್ತಿಗಳ ಅಸ್ತಿತ್ವಕ್ಕೆ (ಅರ್ಥವಾಗುವ ಹಾಗೆ ' ಎ ' ಅನುಸೂಚಿಯ 2 ನೇ ಬಾಬು ಹಾಗೂ ' ಬಿ ' ಅನುಸೂಚಿಯಲ್ಲಿರುವ ಎಲ್ಲಾ ಬಾಬುಗಳು) ಸಂಬಂಧಪಟ್ಟಿರುತ್ತವೆ.

11. ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ಪ್ರಾ.ಸಾ .1 ಬಿ.ಕೆ. ಪದ್ಮಾವತಿಯ ಮೌಖಿಕ ಸಾಕ್ಷ್ಯಕ್ಕೆ ಹಾಗೂ ವಾದಿಗಳ ಪರವಾದ ನಿಶಾನೆ ಪಿ .1 ರಿಂದ ಪಿ .6 ರ ದಸ್ತಾವೇಜೀಯ ಸಾಕ್ಷ್ಯಕ್ಕೆ ಹಾಗೂ ಡಿ.ಡಬ್ಲ್ಯು 1 ರಿಂದ 3 ರ ವರೆಗಿನ ಪ್ರತಿವಾದಿ ಸಾಕ್ಷ್ಯದ ಹಾಗೂ ಪ್ರತಿವಾದಿಗಳ ಪರವಾದ ನಿಶಾನೆ ಡಿ .1 ರಿಂದ ಡಿ .3 ರ ವರೆಗಿನ ದಸ್ತಾವೇಜೀಯ ಸಾಕ್ಷ್ಯಕ್ಕೆ ಅವಕಾಶ ನೀಡಿದ್ದರು.

12. ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ವಾಸಗೃಹವೆಂದು ತಿಳಿಸಲಾಗಿರುವ ' ಎ ' ನುಸೂಚಿ ಸ್ವತ್ತಿನ 1 ನೇ ಸಂಖ್ಯೆಯ ಬಾಬು ಆತನ ಮರಣದ ದಿನಾಂಕದಂದು ಇದ್ದಂತೆ ಹಿರೀಕರಾದ ಬಿ.ಆರ್. ಕೃಷ್ಣಮೂರ್ತಿರಾವ್ರವರಿಗೆ ಸೇರಿತ್ತೆಂದು ನಿರ್ಣಯಕ್ಕೆ ಬಂದಿರುತ್ತಾರೆ.ಅಲ್ಲದೆ ಐವರು ವಾದಿಗಳಿಗೆ ತಲಾ 1/ 8 ರಷ್ಟು ಪಾಲನ್ನು ಮತ್ತು ಮೂವರು ಪ್ರತಿವಾದಿಗಳಿಗೆ ತಲಾ ಅಷ್ಟೇ ಪ್ರಮಾಣದ ಪಾಲನ್ನು ಪರಿಗಣಿಸಿರುತ್ತಾರೆ.ಹಾಗಾಗಿ, ನ್ಯಾಯಾಲಯವು ಪಾಲಿಗಾಗಿ ಒಪ್ಪಿಕೊಂಡಿದ್ದಂಥ ಸ್ವತ್ತು ' ಎ ' ಅನುಸೂಚಿ ಸ್ವತ್ತಿನ 1 ನೇ ಸಂಖ್ಯೆಯ ಬಾಬು ಆಗಿದೆ. ಆದಾಗ್ಯೂ, ' ಎ'ಅನುಸೂಚಿಯ 2 ನೇ ಸಂಖ್ಯೆಯ ಬಾಬಿಗೆ ಸಂಬಂಧಿಸಿದ ಹಾಗೂ ' ಬಿ ' ಅನುಸೂಚಿಯಲ್ಲಿರುವ ಎಲ್ಲಾ ಬಾಬುಗಳಿಗೆ ಸಂಬಂಧಿಸಿದಂತೆ ಮಾಡಿಕೊಂಡ ಮನವಿಯನ್ನು ಪರಿಗಣಿಸಿರಲಿಲ್ಲ.

13. ಈ ನಡುವೆ, 2 ನೇ ಸಂಖ್ಯೆಯ ಪ್ರತಿವಾದಿ ಬಿ.ಕೆ. ಶ್ರೀನಿವಾಸ್ ರವರು, 1 ರಿಂದ 4 ರ ವರೆಗಿನ ವಾದಿಗಳು ವಿವಾಹಿತ ಹೆಣ್ಣು ಮಕ್ಕಳಾಗಿದ್ದು, 5 ನೇ ಸಂಖ್ಯೆಯ ವಾದಿಯು ಮೊದಲೇ ಮರಣ ಹೊಂದಿದ ವಿವಾಹಿತ ಹೆಣ್ಣುಮಗಳ ಮಗನಾಗಿರುವುದರಿಂದ, ಮತ್ತು ಎಲ್ಲಾ ಐದೂ ಜನ ಜನ ಹೆಣ್ಣು ಹೆಣ್ಣು ಮಕ್ಕಳು ವಿವಾಹಿತರಾಗಿದ್ದು ಪ್ರತ್ಯೇಕವಾಗಿ ತಮ್ಮ ತಮ್ಮ ಕುಟುಂಬಗಳೊಂದಿಗೆ ಸುಸ್ಥಿತಿಯಲ್ಲಿ ನೆಲೆಗೊಂಡಿರುವ ಕಾರಣದಿಂದ ' ಎ ' ಅನುಸೂಚಿ ಸ್ವತ್ತಿನ 1 ನೇ ಸಂಖ್ಯೆಯ ಬಾಬಿನಲ್ಲಿಯೂ ಪಾಲುಕೊಡಲು ಹಕ್ಕುಳ್ಳವರಾಗಿರುವುದಿಲ್ಲವೆಂಬ ವಾದವನ್ನು ಅಧಿವಿಚಾರಣಾ ನ್ಯಾಯಾಲಯದಲ್ಲಿ ತಂದಿರುವುದನ್ನು ನಮೂದಿಸುವುದು ಅಗತ್ಯವಾಗಿದೆ ಹಾಗೂ ವಾಸದ ಮನೆಯಾಗಿರುವ ಸದರಿ ಸ್ವತ್ತು, 2 ಹಾಗೂ 3 ನೇ ಸಂಖ್ಯೆಯ ಪ್ರತಿವಾದಿಯು ಸ್ವಾಧೀನದಲ್ಲಿದ್ದು, ಹಿಂದೂ ಉತ್ತರಾಧಿಕಾರ ಅಧಿನಿಯಮ, 1956 ರ 23 ನೇ ಪ್ರಕರಣದ ಮೇರೆಗೆ

ಉಪಬಂಧಿಸಲಾದ ಪ್ರತಿಷೇಧದ ಕಾರಣದಿಂದ ವಿಭಜನೆ ಮಾಡಲಾಗಿಲ್ಲವೆಂಬ ವಾದವನ್ನು ಅಧಿವಿಚಾರಣಾ ನ್ಯಾಯಾಲಯದಲ್ಲಿ 2 ನೇ ಸಂಖ್ಯೆಯ ಪ್ರತಿವಾದಿ ಬಿ.ಕೆ. ಶ್ರೀನಿವಾಸ್ರವರು ವಾದವನ್ನು ಎತ್ತಿರುವುದನ್ನು ಸೂಚಿಸುವುದು ಅಗತ್ಯವಾಗಿದೆ.ಹೀಗಾಗಿ, ಆರ್.ಎಫ್.ಎ.ಸಂಖ್ಯೆ: 450/2009 ರಲ್ಲಿ ಪ್ರತಿವಾದಿಸಂಖ್ಯೆ: 3 ಹಾಗೂ 2 ಇವರು ಹೂಡಿದ ಅಪೀಲಿನಲ್ಲಿ ಅವರು, ' ಎ ' ಅನುಸೂಚಿ ಸ್ವತ್ತಿನ ಬಾಯ್ತಿನಸಂಖ್ಯೆ: 1 ಕ್ಕೆ ಸಂಬಂಧಿಸಿದಂತೆ ಪಾಲನ್ನು ನೀಡುವುದಕ್ಕೆ ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಹೊರಡಿಸಿದ ಡಿಕ್ಕಿಯನ್ನು ತಳ್ಳಿಹಾಕಬೇಕಾಗುತ್ತದೆ ಹಾಗೂ ದಾವೆಯು ನಿಯಮದಂತೆ ವಜಾಗೊಳಿಸಲು ಅರ್ಹವಾಗಿರುತ್ತದೆಂದು ಅವರು ಕ್ಲೇಮು ಮಾಡಿದ್ದಾರೆ.

14. 1 ರಿಂದ 4 ರ ವರೆಗಿನ ವಾದಿಗಳ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಕೆ.ಸಿ. ಶಾಂತಕುಮಾರ್ರವರು, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಹಾಗೂ ' ಎ ' ಅನುಸೂಚಿ ಸ್ವತ್ತಿನ 2 ನೇ ಸಂಖ್ಯೆಯ ಬಾಬ್ತನ್ನು ಅವು ಅಸ್ತಿತ್ವದಲ್ಲಿಯೇ ಇಲ್ಲದಿರುವುದರಿಂದ ವಿಭಜನೆಗೆ ಅವಕಾಶವಿರಲಿಲ್ಲವೆಂದು ನಿರ್ಣಯಕ್ಕೆ ಬರುವಲ್ಲಿ ಹಾಗೂ ಅಭಿಪ್ರಾಯಪಡುವಲ್ಲಿ ಗಂಭೀರವಾದ ದೋಷವಾಗಿದೆಯೆಂದು ನಿವೇದಿಸಿದ್ದಾರೆ.ಮುಂದುವರೆದು, ಮಾನ್ಯ ವಕೀಲರು ವಾದಿಗಳ ಪ್ರತಿಪಾದನೆಯು ' ಎ ' ಅನುಸೂಚಿ ಸ್ವತ್ತಿನ ಸದರಿ 2 ನೇ ಸಂಖ್ಯೆಯ ಬಾಬು ಅಥವಾ ' ಬಿ ' ಅನುಸೂಚಿ ಸ್ವತ್ತುಗಳಿಗೆ ಸಂಬಂಧಿಸಿದ್ದಾಗಿರುವುದರಿಂದ ಯಾವುದೇ ನಿರಾಕರಣೆ ಇರಲಿಲ್ಲ ಎಂದು ನಿವೇದಿಸಿದ್ದಾರೆ.

15. ಮುಂದುವರಿದು, ಮಾನ್ಯ ವಕೀಲರು, ಸದರಿ ಸ್ವತ್ತುಗಳು ಇರುವ ಮಾದರಿ ನಿರಾಕರಿಸಿರುವುದನ್ನು ಹೊರತುಪಡಿಸಿದರೆ, ಪ್ರತಿವಾದಿಗಳು ಇದರ ಮೇಲೆ ಯಾವುದೇ ಎದುರು ಕ್ಲೇಮನ್ನು ಮಾಡಿಲ್ಲವೆಂದು ಹಾಗೂ ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ಸದರಿ ಸ್ವತ್ತುಗಳ ಬಾಬು ಅಸ್ತಿತ್ವದಲ್ಲಿ ಇರುವುದರ ಬಗ್ಗೆ ಅಥವಾ ಇಲ್ಲದಿರುವ ಅಂಶಗಳ ಬಗ್ಗೆ ಆಳವಾಗಿ ಅರಿಯದೆ ದೋಷವೆಸಗಿದ್ದಾರೆಂದು ನಿವೇದಿಸಿದ್ದಾರೆ.

16. 5 ನೇ ಸಂಖ್ಯೆಯ ವಾದಿಂತ ಪರವಾಗಿ ಹಾಜರಾಗಿರುವ ಶ್ರೀ ಜಿ. ವೇದವ್ಯಾಸಾಚಾರ್ ರವರ ಪರವಾದ ವಕೀಲರಾದ ಶ್ರೀ ವಿಕ್ರಮ್ ಪಡೆಯವರು, ಸಂಪೂರ್ಣ ದಾವೆಯಲ್ಲಿರುವ ಒಪ್ಪಿತ ಸಂಗತಿಗಳೆಂದರೆ, ಒಂದು ಶ್ರೀ ಬಿ.ಆರ್. ಕೃಷ್ಣಮೂರ್ತಿ ರಾವ್ ಹಾಗೂ ಮತ್ತೊಂದು ಕಡೆಯಿಂದ ವಾದಿಗಳು ಹಾಗೂ ಪ್ರತಿವಾದಿಗಳ ನಡುವೆ ಇರುವ ಸಂಬಂಧದ್ದಾಗಿದೆಯೆಂದು ನಿವೇದಿಸಿದ್ದಾರೆ.

17. ' ಎ ' ಅನುಸೂಚಿಯಲ್ಲಿರುವ 1 ನೇ ಸಂಖ್ಯೆಯ ಬಾಬಿನ ಮೇಲೆ ದಿವಂಗತ ಬಿ.ಆರ್. ಕೃಷ್ಣಮೂರ್ತಿ ರಾವ್ರವರ ಒಡೆತನವಿರುವುದು ನಿರ್ವಿವಾದಿತ ಸಂಗತಿ.ಮಾನ್ಯ ವಕೀಲರು, ವೈವಾಹಿಕ ಸ್ಥಾನಮಾನದ ಕಾರಣದಿಂದ ಹಾಗೂ ದಸ್ತಾವೇಜುಗಳನ್ನು ಗುರುತಿಸುವ ಪ್ರಕ್ರಿಯಾತ್ಮಕ ಸಂಗತಿಗಳ ಕೊರತೆಯಿಂದ, ' ಎ ' ಅನುಸೂಚಿಯ 2 ನೇ ಸಂಖ್ಯೆಯ ಬಾಬಿಗೆ ಸಂಬಂಧಪಟ್ಟಂತೆ ಸಂಖ್ಯೆಗಳ ಆಳವಾದ ವಿವರಗಳನ್ನು ನೀಡಿಲ್ಲವೆಂದು ನಿವೇದಿಸಿದ್ದಾರೆ.ಆದಾಗ್ಯೂ, ಅಧಿವಿಚಾರಣಾ ನ್ಯಾಯಾಲಯವು, ಸದರಿ ಸ್ವತ್ತು ಪರಿಮಾಣದ ಗುರುತನ್ನು ನಿರ್ಧರಿಸಲು ಪಕ್ಷಕಾರರಿಗೆ ನಿರ್ದೇಶಿಸುವಂತೆ ಸೂಚಿಸುವ ಪ್ರಯತ್ನಗಳನ್ನು ಮಾಡಬಹುದಿತ್ತು.ಮಾನ್ಯ ವಕೀಲರು, ಮುಂದುವರಿದು, ಮೊಕದ್ದಮೆಯಲ್ಲಿ ಗುರುತುಮಾಡಲಾದ ಋಣಭಾರ ಪ್ರಮಾಣಪತ್ರಗಳಾದ ನಿಶಾನೆ ಪಿ .5 ಹಾಗೂ ಪಿ .6 ಹಾಗೂ ' 6 ಎ ' ಅನುಸೂಚಿ ಸ್ವತ್ತಿನ 2 ನೇ ಸಂಖ್ಯೆಯ ಬಾಬಿನ ಇರುವಿಕೆ ಹಾಗೂ ಶ್ರೀ ಬಿ.ಆರ್. ಕೃಷ್ಣಮೂರ್ತಿರಾವ್ ರವರ ಹೆಸರಿನಲ್ಲಿನ ಅವರ ಒಡೆತನಕ್ಕೆ ಸಂಬಂಧಪಟ್ಟಂತೆ ನಿಶ್ಚಿತ ಮುನ್ನಡೆಯನ್ನು ನೀಡಿ ಸುಳಿವನ್ನು ಕೊಡುತ್ತಿದ್ದವು ಎಂದು ನಿವೇದಿಸಿದ್ದಾರೆ.

18. ಮುಂದುವರಿದು, ಮಾನ್ಯ ವಕೀಲರು, ಎಲ್ಲಾ ವಾದಿಗಳು ಹಾಗೂ ಪ್ರತಿವಾದಿಗಳು, ಹಿಂದೂ ಉತ್ತರಾಧಿಕಾರ ಅಧಿನಿಯಮ, 1956 ರ ಮೇರೆಗೆ ಉಯಿಲಿಲ್ಲದೆ ಉತ್ತರಾಧಿಕಾರ ನಿಯಮಗಳಿಗನುಸಾರವಾಗಿ ಶ್ರೀ ಬಿ.ಆರ್. ಕೃಷ್ಣಮೂರ್ತಿಯವರ ಸ್ವಿರಾಸ್ತಿಗೆ ಸಮಾನವಾಗಿ ಉತ್ತರಾಧಿಕಾರ ಪಡೆಯಲು ಹಕ್ಕುಳವರಾಗುವರು ಎಂದು ನಿವೇದಿಸಿದ್ದಾರೆ.ಹಿಂದೂ ಉತ್ತರಾಧಿಕಾರ ಅಧಿನಿಯಮ, 1956 ರ 23 ನೇ ಪ್ರಕರಣದ ವ್ಯಾಪ್ತಿಯನ್ನು ಪ್ರತಿವಾದಿಗಳು ತಪ್ಪಾಗಿ ಮಂಡಿಸಿದ್ದರು.

19. ಪ್ರತಿವಾದಸಂಖ್ಯೆ: 1/ಎದುರುದಾರಸಂಖ್ಯೆ: 1 ರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಅರವಿಂದ ಬಾಬು ಬಿ.ಎಸ್. ಇವರು, ಪ್ರತಿವಾದಿಗಳು ಸಂಬಂಧಕ್ಕೆ ಸಂಬಂಧಪಟ್ಟ ವಾದಗಳನ್ನು ನಿರಾಕರಿಸಿರಲಿಲ್ಲವೆಂದು ನಿವೇದಿಸಿದ್ದಾರೆ.ಅಷ್ಟೇ ಅಲ್ಲದೆ, ಮಾನ್ಯ ವಕೀಲರು, ಪ್ರತಿವಾದಿಸಂಖ್ಯೆ: 1 ಬಿ.ಕೆ. ಗಣೇಶ್ ರವರು, ಸ್ವತ್ತುಗಳನ್ನು ಪಾಲು ಮಾಡುವುದಕ್ಕೆ ತನ್ನ ಆಕ್ಷೇಪಣೆಯಿಲ್ಲವೆಂಬುದಕ್ಕೆ ಸಂಬಂಧಪಟ್ಟಂತೆ ಎರಡು ಅಫಿಡವಿಟ್ಗಳನ್ನು ಸಲ್ಲಿಸಿರುವುದನ್ನೂ ಕೂಡ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.ಶ್ರೀ ಬಿ.ಆರ್. ಕೃಷ್ಣಮೂರ್ತಿರಾವುವರು ಕೂಡ ಎಲ್ಲಾ ವಾರಸುದಾರರ ಪರವಾಗಿ ಈ ಪ್ರತಿವಾದಿಯ ಪಾಲನ್ನು ಬಿಟ್ಟು ಕೊಡುವುದಕ್ಕೆ ಸಂಬಂಧಪಟ್ಟಂತೆ ಅಫಿಡವಿಟ್ 4 ನೇ ಕಂಡಿಕೆಯ ಕಡೆ ನ್ಯಾಯಾಲಯದ ಗಮನ ಸೆಳೆದಿದ್ದಾರೆ.

20. ಇತರ ಅಂಶಗಳ ಚಿಂತನೆ ಮಾಡುವ ಮೊದಲು, 5 ನೇ ಸಂಖ್ಯೆಯ ವಾದಿ-ತೇಜಸ್ವಿ ರಘು ಹೆಚ್ಚುವರಿ ದಸ್ತಾವೇಜುಗಳನ್ನು ಮಂಡಿಸುವುದಕ್ಕಾಗಿ ವಾದಕಾಲೀನ ಅರ್ಜಿಸಂಖ್ಯೆ: 1/2013 ರಲ್ಲಿದಿನಾಂಕ: 30.9.2013 ರಂದು ಹಾಗೂ ವಾದಕಾಲೀನ ಅರ್ಜಿಸಂಖ್ಯೆ: 2/2018 ರಲ್ಲಿದಿನಾಂಕ: 28.8.2018 ರಂದು ಹಾಗೂ ತಿದ್ದುಪಡಿಗಾಗಿ ಸಲ್ಲಿಸಿದ ವಾದಕಾಲೀನ ಅರ್ಜಿಸಂಖ್ಯೆ:1/2018 ರಲ್ಲಿದಿನಾಂಕ: 28.8.2018 ರ ಸಿವಿಲ್ ಪ್ರಕ್ರಿಯಾ ಸಂಹಿತೆಯ 27 ನೇ ನಿಯಮದ 41 ನೇ ಆದೇಶದ ಮೇರೆಗೆ ಸಲ್ಲಿಸಿದ ಎರಡೂ ಅರ್ಜಿಗಳನ್ನು ವಿಲೆ ಮಾಡುವುದು ಅಗತ್ಯವಾಗಿದೆ.

21. ತಿದ್ದುಪಡಿಗಾಗಿ ಸಲ್ಲಿಸಿದ ವಾದ ಕಾಲೀನ ಅರ್ಜಿಸಂಖ್ಯೆ: 1/2018 ಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, 5 ನೇ ಸಂಖ್ಯೆಯ ವಾದಿಯು ಕೋರಿದ ಪ್ರಸ್ತಾವಿತ ತಿದ್ದುಪಡಿಯು ಈ ಮುಂದಿನಂತಿದೆ:

" ಸಾರ್ವಭೌಮನಗರ, 4 ನೇ ಮುಖ್ಯ ರಸ್ತೆ, 1 ನೇ ಅಡ್ಡರಸ್ತೆ, ಚಿಕ್ಕಲ್ಲಸಂದ್ರ, ಉತ್ತರಹಳ್ಳಿ ಹೋಬಳಿ, ಬೆಂಗಳೂರು - 560085 ಇಲ್ಲಿರುವ ಕೆ.ಎಸ್.ಆರ್.ಟಿ.ಸಿ. ಬಡಾವಣೆ ಬಳಿ ಪ್ರಸ್ತುತ ಎಂ .26, ಸರ್ವೆಸಂಖ್ಯೆ: 69 ರಲ್ಲಿ ನಿವೇಶನಸಂಖ್ಯೆ: 61 ಸ್ವಳ, ಪೂರ್ವದಿಂದ ಪಶ್ಚಿಮಕ್ಕೆ:40 ಅಡಿ, ಉತ್ತರದಿಂದ ದಕ್ಷಿಣಕ್ಕೆ:30 ಅಡಿ, ಒಟ್ಟಾರೆಯಾಗಿ 1200 ಚದುರ ಅಡಿ ಅಳತೆಯಿರುವ, ವಾಸದ ಕಟ್ಟಡದಿಂದ ಕೂಡಿದ ಹಾಗೂ

| | |
|---|---|
| ಪೂರ್ವಕ್ಕೆ: | ರಸ್ತೆ |
| ಪಶ್ಚಿಮಕ್ಕೆ : | ತಾಕುಸಂಖ್ಯೆ: 50 |
| ಉತ್ತರಕ್ಕೆ: | ತಾಕುಸಂಖ್ಯೆ: 60 |
| ದಕ್ಷಿಣಕ್ಕೆ: | ತಾಕುಸಂಖ್ಯೆ: 62 ", |

-ಎಲ್ಲೆ ಕಟ್ಟನ್ನು ಹೊಂದಿರುವ ಜಮೀನು.

22. ಹಾಗೆಯೇ, 5 ನೇ ಸಂಖ್ಯೆಯ ವಾದಿಯು ಸಲ್ಲಿಸಿದ ವಾದಕಾಲೀನ ಅರ್ಜಿಸಂಖ್ಯೆ: 1/2013 ಹಾಗೂ ವಾದಕಾಲೀನ ಅರ್ಜಿಸಂಖ್ಯೆ: 2/2018 ಕ್ಕೆ ಹೆಚ್ಚುವರಿ ಸಾಕ್ಷ್ಯವನ್ನು ಹಾಜರುಪಡಿಸಲು ಅನುಮತಿ ಕೋರಿದ್ದು ಈ ಮುಂದಿನ ದಸ್ತಾವೇಜುಗಳ ರೂಪದಲ್ಲಿರುತ್ತದೆ.

ವಾದಕಾಲೀನ ಅರ್ಜಿಸಂಖ್ಯೆ: 1/2013 ರಲ್ಲಿ

"1. ಶ್ರೀ ಬಿ.ಆರ್. ಕೃಷ್ಣಮೂರ್ತಿ ರಾವ್‌ರವರ ಹೆಸರಿನಲ್ಲಿ ಮಾಡಿಕೊಂಡದಿನಾಂಕ: 24.1.1981 ರ ಕ್ರಯಪತ್ರದ ಪ್ರಮಾಣೀಕೃತ ಪ್ರತಿ;

2. ದಾವಾ ಅನುಸೂಚಿ- ಎ, ಬಾಬ್ತುಸಂಖ್ಯೆ: 2 (ಬಿ) ಗೆ ಸಂಬಂಧಿಸಿದ 1 ನೇ ಏಪ್ರಿಲ್, 2004 ರಿಂದ 18 ನೇ ಜನವರಿ, 2013 ರ ಅವಧಿಯವರೆಗಿನ ಋಣಭಾರ ಪ್ರಮಾಣಪತ್ರ ".

ವಾದಕಾಲೀನ ಅರ್ಜಿಸಂಖ್ಯೆ: 2/2018 ರಲ್ಲಿ

"1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಉತ್ತರಹಳ್ಳಿ ಉಪ-ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ನೀಡಿದ ಪತ್ರದಿನಾಂಕ: 10.12.2015;

2. ಬಿಬಿಎಂಪಿ, ಉತ್ತರಹಳ್ಳಿ ಉಪ-ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಹೊರಡಿಸಿದ ಸಾರ್ವಭೌಮ ನಗರ ಬಡಾವಣೆಯ ಸ್ಕೂಲನಕ್ಷೆ/ನಕ್ಷೆಯ ದೃಢೀಕೃತ ಪ್ರತಿ;

3. 5 ನೇ ಅಪೀಲುದಾರನು ( 1 ನೇ ಎದುರುದಾರನು ಬಿಬಿಎಂಪಿಗೆ ಸಲ್ಲಿಸಿದದಿನಾಂಕ: 06.01.2017 ರ ಪತ್ರದ ದೃಢೀಕೃತ ಪ್ರತಿಯನ್ನು ಕೋರಿ) ಬಿಬಿಎಂಪಿಗೆ ಸಲ್ಲಿಸಿದದಿನಾಂಕ: 01.03.2017 ರ ಪತ್ರ. ಸದರಿದಿನಾಂಕ: 01.03.2017 ರ ಪತ್ರವು, ಒಂದು ಪತ್ರದ ಪ್ರತಿಯನ್ನು ಮಾತ್ರ ನೀಡಲಾಗಿದೆ ಹಾಗೂ ಇತರ ದಸ್ತಾವೇಜನ್ನು ನೀಡಿರುವುದಿಲ್ಲ (ಎದುರುದಾರನು) ಎಂಬ ಷರಾದೊಂದಿಗೆ ಬಿಬಿಎಂಪಿಯ ಸ್ವೀಕೃತಿಯನ್ನು ಒಳಗೊಂಡಿರುತ್ತದೆ.

4. 1 ನೇ ಸಂಖ್ಯೆಯ ಎದುರುದಾರನು ಬಿಬಿಎಂಪಿಗೆ ನೀಡಿದದಿನಾಂಕ: 06.01.2017 ರ ಪತ್ರದ ಯಥಾಪ್ರತಿ ".

23. 2 ನೇ ಸಂಖ್ಯೆಯ ಪ್ರತಿವಾದಿ/ 2 ನೇ ಸಂಖ್ಯೆಯ ಎದುರುದಾರ ಬಿ.ಕೆ. ಶ್ರೀನಿವಾಸರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಎಂ. ನರಸಿಂಹ ಮೂರ್ತಿಯವರು, ಅಂಥ ಅರ್ಜಿಗಳನ್ನು ಪುರಸ್ಕರಿಸುವುದಕ್ಕೆ ಯಾವುದೇ ಆಕ್ಷೇಪಣೆಯಿಲ್ಲವೆಂದು ನಿವೇದಿಸಿದ್ದರು.ಆದಾಗ್ಯೂ, ವಿಚಾರಣೆಗೆ ಕರೆಯಬೇಕೆಂದು ನಿವೇದಿಸಿದ್ದರು.

24. ಮೊಕದ್ದಮೆಯ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಪರಿಗಣಿಸಿ, ಸದರಿ ಅರ್ಜಿಗಳನ್ನು ಪುರಸ್ಕರಿಸಲಾಗಿದೆ.5 ನೇ ಸಂಖ್ಯೆಯ ವಾದಿಗೆ ಪ್ರಸ್ತಾವಿತ ತಿದ್ದುಪಡಿಯನ್ನು ಸೇರಿಸಲು ವಾದಪತ್ರವನ್ನು ತಿದ್ದುಪಡಿ ಮಾಡಲು ಹಾಗೂ ಹೆಚ್ಚುವರಿ ದಸ್ತಾವೇಜುಗಳಾಗಿ ವಾದಕಾಲೀನ ಅರ್ಜಿಸಂಖ್ಯೆ: 1/2013 ಹಾಗೂ ವಾದಕಾಲೀನ ಅರ್ಜಿ ಸಂ .2/2018 ರೊಂದಿಗೆ ಸಲ್ಲಿಸಿದ ದಸ್ತಾವೇಜುಗಳನ್ನು ಹಾಜರುಪಡಿಸಲು ಅನುಮತಿಸಲಾಗಿದ್ದು, ಸದರಿ ಅರ್ಜಿಗಳೊಂದಿಗೆ ಹಾಜರುಪಡಿಸಲಾದ ದಸ್ತಾವೇಜುಗಳನ್ನು ದಾಖಲೆಗೆ ತೆಗೆದುಕೊಳ್ಳಬೇಕೆಂದು ಆದೇಶ ಹೊರಡಿಸಿದೆ.

25. ಮೊಕದ್ದಮೆಯ ಒಟ್ಟಾರೆ ಸಂದರ್ಭ ಹಾಗೂ ಸನ್ನಿವೇಶಗಳಲ್ಲಿ, ಚರ್ಚಿತ ಪ್ರಶ್ನೆ ಇದಾಗಿರುತ್ತದೆ,

' ಎ ' ಅನುಸೂಚಿ ಸ್ವತ್ತಿನ 2 ನೇ ಸಂಖ್ಯೆಯ ಬಾಬು ಹಾಗೂ ' ಬಿ ' ಅನುಸೂಚಿ ಸ್ವತ್ತಿನ 1 ರಿಂದ 6 ರ ವರೆಗಿನ ಸಂಖ್ಯೆಯ ಬಾಬುಗಳ ಇರುವಿಕೆ ಅಥವಾ ಇಲ್ಲದಿರುವಿಕೆಗೆ ಸಂಬಂಧಿಸಿದಂಥ ಪಕ್ಷಕಾರರ ನಡುವಿನ ವ್ಯಾಜ್ಯಕಾರಣ ಇರುವುದಿಲ್ಲವೆ ಹಾಗೂ ಕಾಲ್ಪನಿಕವೇ?ಅಷ್ಟೇ ಅಲ್ಲದೆ, ಶ್ರೀ ಬಿ.ಆರ್. ಕೃಷ್ಣಮೂರ್ತಿ ರಾವ್ರವರು ಸದರಿ ಸ್ವತ್ತಿನ ಮೇಲೆ ಹೊಂದಿರುವ ಒಡೆತನದ ಬಗ್ಗೆ ಪ್ರಶ್ನೆಯಿಲ್ಲದೇ, ವಾದಿಗಳು ಹಾಗೂ ಪ್ರತಿವಾದಿಗಳ ಮಧ್ಯೆ ೧ ವಿಭಾಗ ಮಾಡಬೇಕಾಗುತ್ತದೆಯೇ?

26. ' ಎ ' ಅನುಸೂಚಿಯ ಸದರಿ ಬಾಬಿನ ಸಂ .2 ಅಥವಾ ' ಬಿ ' ಅನುಸೂಚಿಯ 6 ನೇ ಬಾಬುಗಳಿಗೆ ಸಂಬಂಧಿಸಿದಂತೆ ಪ್ರತಿವಾದಿಗಳು ಯಾವುದೇ ವಿರೋಧಿ ಕ್ಲೇಮುಗಳಿಲ್ಲವೆಂದು, ಹಾಗೆಯೇ ಪ್ರತ್ಯೇಕ ಸ್ವತ್ತು ಅಥವಾ ಸ್ವತ್ತನ್ನು ವಿಲೇ ಮಾಡಿರುವ ಬಗ್ಗೆಯೂ ಕ್ಲೇಮು ಇಲ್ಲವೆಂಬುದನ್ನು ದಾಖಲಿಸುವುದು ಅಗತ್ಯವಾಗಿದೆ.

27. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಪ್ರತಿವಾದಿಗಳ ದೃಷ್ಟಿಯಿಂದ ಒಂದು ವಾದವೇನೆಂದರೆ, ದಾವಾ ಸ್ವತ್ತುಗಳು, ಅಸ್ತಿತ್ವದಲ್ಲಿಲ್ಲದ ಸ್ವತ್ತುಗಳಾಗಿವೆ.ವಾದಗಳಲ್ಲಿ, ಸಾಕ್ಷ್ಯಗಳಲ್ಲಿ ಅಥವಾ ದಸ್ತಾವೇಜುಗಳ ಮೂಲಕ ಯಾವುದೇ ಸಂದರ್ಭದಲ್ಲೂ ಪುನರಾವರ್ತಿಸಿದಂತೆ ಪ್ರತಿವಾದಿಗಳು, ಸ್ವತ್ತಿನ ಸದರಿ ಬಾಬುಗಳು ನಿರ್ದಿಷ್ಟವಾಗಿ ' ಎ ' ಅನುಸೂಚಿ ಸ್ವತ್ತಿನ 2 ನೇ ಸಂಖ್ಯೆಯ ಬಾಬು ಇರುವುದಿಲ್ಲವೆಂದು ಹೇಳಲಿಲ್ಲ.ಶ್ರೀ ಬಿ.ಆರ್. ಕೃಷ್ಣಮೂರ್ತಿಯವರ ಸ್ವತ್ತಾಗಿದೆಯೆಂದು ಅಭಿಪ್ರಾಯಪಟ್ಟರೆ, ಆ ಮೂಲಕ, ಇದು ಭಾಗ ಮಾಡಲು ದಾರಿ ಮಾಡಿಕೊಡುತ್ತದೆ.2 ನೇ ಸಂಖ್ಯೆಯ ಬಾಬಿನ ಅಡಿಯಲ್ಲಿ ' ಎ ' ಅನುಸೂಚಿಯಲ್ಲಿ ಸೂಚಿಸಲಾದಂಥ ಎಲ್ಲಾ ಮೂರು ಸ್ವತ್ತುಗಳು, ಪ್ರತಿಯೊಂದೂ 30 X 40 ಅಡಿ ಅಳತೆ ನಿವೇಶನಗಳಾಗಿದ್ದು, ಏಕಲವ್ಯನಗರ, ಸಾರ್ವಭೌಮನಗರ ಹಾಗೂ ಕೆ.ಆರ್.ಪುರಂನಲ್ಲಿ ಖಾಲಿಯಿರುವ ನಿವೇಶನಗಳಾಗಿವೆಯೆ ೦ ಬುದು ವಾದಿಗಳ ಕ್ಲೇಮಾಗಿದೆಯೆಂಬ ಸಂಗತಿಯ ಹಿನ್ನೆಲೆಯಲ್ಲಿ ಈ ತೀರ್ಮಾನ ಮಾಡಲಾಗಿದೆ.

28. ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ವಿಷಯವನ್ನು ವಿಲೇ ಮಾಡುವಾಗ, ವಾದಿಗಳು, ' ಎ ' ಅನುಸುಚಿಯ 2 ನೇ ಸಂಖ್ಯೆಯ ಬಾಬು ಹಾಗೂ ' ಬಿ ' ಅನುಸೂಚಿಯ ಸಂಪೂರ್ಣ ಬಾಬುಗಳ ಇರುವಿಕೆ ಅಥವಾ ಇಲ್ಲದಿರುವಿಕೆಯನ್ನು ಗುರುತಿಸುವುದನ್ನು ಸಾಬೀತುಪಡಿಸಲು ವಿಫಲರಾಗಿರುವುದು ಕಂಡುಬರುತ್ತದೆ.ಸದರಿ ಸ್ವತ್ತುಗಳು ಶ್ರೀ ಬಿ.ಆರ್. ಕೃಷ್ಣಮೂರ್ತಿಯವರಿಗೆ ಸೇರಿವೆಯೆಂದು ರುಜುವಾತುಪಡಿಸಿದರೆ, ಏಕರೂಪವಾಗಿ, ' ಎ ' ಅನುಸೂಚಿ ಸ್ವತ್ತಿನ 2 ನೇ ಸಂಖ್ಯೆಯ ಬಾಬು ಹಾಗೂ ' ಬಿ ' ಅನುಸೂಚಿಯ ಸಂಪೂರ್ಣ ಬಾಬುಗಳಿಗೆ ಸಂಬಂಧಿಸಿದಂತೆ ಪಕ್ಷಕಾರರಿಗೆ ಉಯಿಲಿಲ್ಲದ ವಾರಸುದಾರಿಕೆಗೆ ಲಭ್ಯವಾಗುತ್ತದೆ.ಆದಾಗ್ಯೂ, ' ಎ ' ಅನುಸೂಚಿ ಸ್ವತ್ತಿನ 1 ನೇ ಸಂಖ್ಯೆಯ ಬಾಬಿಗೆ ಸಂಬಂಧಿಸಿದ ಪ್ರತಿವಾದಿಗಳಿಂದ ಯಾವುದೇ ಗಂಭೀರ ವಿರೋಧವಿರುವುದಿಲ್ಲ.

29. ನ್ಯಾಯಾಲಯದ ಮುಂದೆ ಇಡಲಾದ ಸಾಕ್ಷ್ಯಾಧಾರಗಳ ಪ್ರಕಾರ, ಪ್ರತಿವಾದಿಗಳು ದಾವಾ ಸ್ವತ್ತುಗಳ ಮೇಲೆ ಪ್ರತಿ ಕ್ಲೇಮು ಮಾಡಿಲ್ಲವೆನ್ನುವ ಸಂಗತಿಯ ಹಿನ್ನೆಲೆಯಲ್ಲಿ, ವಾದಕಾಲೀನ ಅರ್ಜಿಸಂಖ್ಯೆ: 1/2013 ಹಾಗೂ ವಾದಕಾಲೀನ ಅರ್ಜಿಸಂಖ್ಯೆ: 2/2018 ರ ಮೇರೆಗೆ ಹಾಜರುಪಡಿಸಲು ಕೋರಿದ ದಸ್ತಾವೇಜುಗಳು ಕ್ರಯಪತ್ರದ ಋಣಭಾರ ಪ್ರಮಾಣಪತ್ರ, ಬಿಬಿಎಂಪಿ ಪ್ರಾಧಿಕಾರಿಗಳಿಗೆ ಬರೆದ ಪತ್ರದ ಮಾಹಿತಿ ಹಕ್ಕು ಅರ್ಜಿಯ ಪ್ರತಿಯ ಪ್ರಮಾಣೀಕೃತ ಪ್ರತಿಗಳಾಗಿವೆಯೆಂಬ ಸಂಗತಿಯನ್ನು ಪರಿಗಣಿಸಿ, ಅದರಲ್ಲೂ ವಿಶೇಷವಾಗಿ ಹೆಚ್ಚುವರಿ ಮೌಖಿಕ ಸಾಕ್ಷ್ಯವನ್ನು ಒದಗಿಸಿದ್ದಕ್ಕಾಗಿ ಅಧಿವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸಬೇಕಾದ ವಿಷಯವಲ್ಲ. ಹೀಗಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 41 ನೇ ಆದೇಶದ 23, 24 ನೇ ನಿಯಮಗಳ ಅರ್ಥವ್ಯಾಪ್ತಿಯೊಳಗೆ, ಈ

ನ್ಯಾಯಾಲಯವು ದಸ್ತಾವೇಜುಗಳ ಅಡಕಾಂಶಗಳ ಆಧಾರದ ಮೇಲೆ ಅದರಲ್ಲೂ ವಿಶೇಷವಾಗಿ, ವಾದಿಗಳು ಸಾಮಾನ್ಯ ಹಿತಾಸಕ್ತಿಯನ್ನು ಕ್ಲೇಮು ಮಾಡಿದ್ದಾರೆ ಹಾಗೂ ಪ್ರತಿವಾದಿಗಳು ಯಾವುದೇ ಪ್ರತಿ ಹಿತಾಸಕ್ತಿಯನ್ನು ಮಾಡಿರುವುದಿಲ್ಲ ಎಂಬ ಸಂಗತಿಯ ಹಿನ್ನೆಲೆಯಲ್ಲಿ ದಸ್ತಾವೇಜುಗಳಿಗೆ ಸಂಬಂಧಿಸಿದ ವಿಷಯವನ್ನು ಈ ನ್ಯಾಯಾಲಯವು ಸಮರ್ಪಕವಾಗಿ ಮತ್ತು ಸಂಪೂರ್ಣವಾಗಿ ವಿಲೇವಾರಿ ಮಾಡಿರಬಹುದಾಗಿದೆ ಎಂಬುದನ್ನು ಗಮನಿಸುತ್ತದೆ.ಸ್ವತ್ತು ದಿವಂಗತ ಬಿ.ಆರ್. ಕೃಷ್ಣಮೂರ್ತಿರಾವ್‌ವರ ಹೆಸರಿನಲ್ಲಿ ಇದ್ದರೆ, ಪ್ರತಿವಾದಿಗಳೂ ಕೂಡ, ವಾದಿಗಳೊಂದಿಗೆ ತಮ್ಮ ತಮ್ಮ ಪಾಲುಗಳನ್ನು ಪಡೆಯಲು ನಿಲ್ಲುತ್ತಾರೆ.

30. ಈಗ ತೀರ್ಪಿನ ಉದ್ದವನ್ನು ಕಡಿಮೆಗೊಳಿಸಲು ಬೆಂಗಳೂರಿನ ಜಯನಗರ 3 ನೇ ಬ್ಲಾಕ್‌ನಲ್ಲಿ ವಾಸಗೃಹವಾಗಿರುವ ' ಎ ' ಅನುಸೂಚಿ ಸ್ವತ್ತಿನ ಬಾಬು ಸಂಖ್ಯೆ :.1 ನ್ನು ಗಮನಿಸುವುದು ಅಗತ್ಯವಾಗಿದೆ.ವಾದಿಗಳು ಹಾಗೂ ಪ್ರತಿವಾದಿಗಳು, ದಿವಂಗತ ಶ್ರೀ ಬಿ.ಆರ್. ಕೃಷ್ಣಮೂರ್ತಿಯವರೊಂದಿಗೆ ಹೊಂದಿರುವ ಒಡಹುಟ್ಟಿನ ಸಂಬಂಧ ಹಾಗೂ ದಾವಾ ಸ್ವತ್ತಿನ ಮೇಲಿರುವ ಅವರ ಒಡೆತನದ ಸಂಬಂಧದಲ್ಲಾಗಲಿ ಸಮಾನ ಅಂಶಗಳನ್ನು ಹೊಂದಿದ್ದಾರೆ. 'ಬಿ ' ಅನುಸೂಚಿ ಸ್ವತ್ತಿನ ಆರು ಬಾಬುಗಳಿಗೆ ಸ ಂ ಬ ಂ ಧಪಡುವಷ್ಟರಮಟ್ಟಿಗೆ ಆ ಸ್ವತ್ತುಗಳು ಇದ್ದು, ಅವು ಶ್ರೀ ಬಿ.ಆರ್. ಕೃಷ್ಣಮೂರ್ತಿ ರಾವ್ ರವರ ಒಡೆತನದಲ್ಲಿರುವುದನ್ನು ಹಾಗೂ ಪಾಲಿಗೆ ಅವು ಲಭ್ಯವಿವೆ ಎಂದು ತೀರ್ಮಾನಿಸಲು ನ್ಯಾಯಾಲಯದ ಮುಂದೆ ನಿರ್ದಿಷ್ಟ ಹಾಗೂ ನಿಖರ ವಿವರಗಳನ್ನು ಮಂಡಿಸಿರುವುದಿಲ್ಲ.ಹೀಗಾಗಿ ಇದರ ಸಂಬಂಧದಲ್ಲಿ ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ' ಬಿ ' ಅನುಸೂಚಿ ಬಾಬಿನ ಪಾಲಿಗೆ ಸಂಬಂಧಿಸಿದ ಮನವಿಯನ್ನು ಪರಿಗಣಿಸದಿರುವುದು ಸರಿಯಾಗಿದೆ ಎಂದು ನಾನು ಗುರುತಿಸಿದ್ದೇನೆ.

31. ' ಎ ' ಅನುಸೂಚಿ ಸ್ವತ್ತಿನ 2 ನೇ ಸ ಂ ಖ್ಯೆಯ ಬಾಬಿಗೆ ಸಂಬಂಧಪಡುವಷ್ಟರಮಟ್ಟಿಗೆ, ಪ್ರತಿವಾದಿಗಳು, ಸದರಿ ಸ್ವತ್ತು ಇರುವುದನ್ನು ನಿರಾಕರಿಸಿರುವ ಸಂಬಂಧ ದಾಖಲೆಯಿರಿಸಿದ್ದು, ಅಧಿವಿಚಾರಣಾ ನ್ಯಾಯಾಧೀಶರು, 6 ' ಎ ' ಅನುಸೂಚಿಯ 2 ನೇ ಸಂಖ್ಯೆಯ ಬಾಬು ವಿಭಜನೆಗೆ ಲಭ್ಯವಿಲ್ಲವೆಂಬ ಆಧಾರದ ಮೇಲೆ ವಾದಿಗಳ ಕ್ಲೇಮನ್ನು ನೆಲೆ ತಪ್ಪಿಸಲಾಗಿದೆ.ಮೇಲೆ ಸೂಚಿಸಲಾದಂತೆ, ವ್ಯಾಜ್ಯಕಾಲೀನ ಅರ್ಜಿಸಂಖ್ಯೆ: 1/2018 ತಿದ್ದುಪಡಿ ಅರ್ಜಿಯನ್ನು ಪುರಸ್ಕರಿಸಿರುವ ಕಾರಣದಿಂದ, ' ಎ ' ಅನುಸೂಚಿ ಸ್ವತ್ತಿನ ದಾವಾ ಬಾಬು ಸಂ .2 (ಬಿ) ಯ ವಿವರಣೆ ಹಾಗೂ ಗುರುತನ್ನು ವಾದಪತ್ರದಲ್ಲಿ ಸೇರಿಸಲು ಕೋರಲಾಗಿದೆ.

32. ನಿವೇಶನ ಸಂ. 61 ರ ಬಾಬು, ಸಾರ್ವಭೌಮನಗರ, 4 ನೇ ಮುಖ್ಯರಸ್ತೆ 1 ನೇ ಅಡ್ಡರಸ್ತೆ, ಚಿಕ್ಕಲ್ಲ ಸಂದ್ರ, ಉತ್ತರಹಳ್ಳಿ ಹೋಬಳಿ, ಬೆಂಗಳೂರು -560085 ಇಲ್ಲಿರುವ ಕೆ.ಎಸ್.ಆರ್.ಟಿ.ಸಿ. ಬಡಾವಣೆ ಬಳಿಯಿರುವ ಸರ್ವೆ ನಂ .69, ಎಂ .26 ರಲ್ಲಿನ 61 ನೇ ನಿವೇಶನವನ್ನು ಸೂಚಿಸುತ್ತಿದ್ದು ಇದು ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ ಹಾಗೂ ಉತ್ತರದಿಂದ ದಕ್ಷಿಣಕ್ಕೆ 30 ಅಡಿ ಇದ್ದು, ಒಟ್ಟು 1200 ಚದುರ ಅಡಿ ಅಳತೆಯಿರುವ ವಾಸದ ಕಟ್ಟಡವಾಗಿದ್ದು, ಪೂರ್ವಕ್ಕೆ:ರಸ್ತೆ, ಪಶ್ಚಿಮಕ್ಕೆ ತಾಕು ಸಂ .50, ಉತ್ತರಕ್ಕೆ ತಾಕುಸಂಖ್ಯೆ: 60 ಹಾಗೂ ದಕ್ಷಿಣಕ್ಕೆ:ತಾಕು ಸಂ .62 ರ ಎಲ್ಲೆಯನ್ನು ಹೊಂದಿದ್ದು, ಮತ್ತು ಇದು ' ಎ ' ಅನುಸೂಚಿಯ 2 ನೇ ಸಂಖ್ಯೆಯ ಬಾಯ್ದೆಂದು ಹೇಳಲಾಗಿದೆ.

33. ಪ್ರಾಸಂಗಿಕವಾಗಿ, ' ಎ ' ಅನುಸೂಚಿ ಸ್ವತ್ತಿನ 2 ನೇ ಸಂಖ್ಯೆಯ ಬಾಬಿನ ಬಾಬು (ಬಿ) ಎಂದು ಹೇಳಲಾಗಿರುವ ಸ್ವತ್ತನ್ನು ಶ್ರೀ ಬಿ.ಆರ್. ಕೃಷ್ಣಮೂರ್ತಿರಾವ್ ರವರು 1,000/- ರೂ.ಗಳ ನಗದು ಹಣಕ್ಕೆ ಬಿ.ವಿ.

ಮುನಿವೆಂಕಟಪ್ಪನಿಂದದಿನಾಂಕ: 24.01.1981 ರ ನೋಂದಾಯಿತ ಕ್ರಯಪತ್ರದಲ್ಲಿ ಖರೀದಿ ಮಾಡಿದ್ದಾರೆಂದು ಸಹ ಕ್ಲೇಮು ಮಾಡಲಾಗಿದೆ.

34, ' ಎ ' ಅನುಸೂಚಿ ಸ್ವತ್ತಿನ ಸದರಿ ಬಾಬು ಸಂ .2 (ಬಿ) ದಿವಂಗತ ಬಿ.ಆರ್. ಕೃಷ್ಣಮೂರ್ತಿ ರಾವ್ರವರಿಗೆ ಸೇರಿದ್ದು, ಅವರು ಮೃತರಾದಾಗ ಸದರಿ ಸ್ವತ್ತಿಗೆ ಅವರು ಮಾಲೀಕರಾಗಿದ್ದರು.ಹೀಗಾಗಿ ವಾದಿಗಳು ಪ್ರತಿವಾದಿಗಳು ಉಯಿಲು ಬರೆದಿಡದ ವಾರಸುದಾರಿಕೆಗಾಗಿ ಸದರಿ ಸ್ವತ್ತು ಲಭ್ಯವಾಗುತ್ತದೆ ಎಂದು ವಾದಿಗಳು ಕ್ಲೇಮು ಮಾಡಿರುವರೆಂದು ಸಂಕ್ಷೇಪಿಸಲಾಗಿದೆ.

35. ಇದಕ್ಕೆ ವಿರುದ್ಧವಾಗಿ, ಪ್ರತಿವಾದಿಗಳು, ಅದರಲ್ಲೂ ನಿರ್ದಿಷ್ಟವಾಗಿ, ಪ್ರತಿವಾದಿ ಶ್ರೀ ಬಿ.ಕೆ. ಶ್ರೀನಿವಾಸ, ಸದರಿ ಸ್ವತ್ತು ಇರಲೇ ಇಲ್ಲವೆಂದು ವಾದಿಸಿದ್ದಾರೆ.ಸದರಿ ಪ್ರತಿವಾದಿಗೆ ಸಂಬಂಧಪಡುವಷ್ಟರಮಟ್ಟಿಗೆ ತೆಗೆದುಕೊಳ್ಳಲಾದ ಸದರಿ ನಿಲುವಿನ ಹಿನ್ನೆಲೆಯಲ್ಲಿ, ಸ್ವತ್ತು ಇರುವುದಿಲ್ಲ.ಆದಾಗ್ಯೂ, ಇದು ಶ್ರೀ ಬಿ.ಆರ್. ಕೃಷ್ಣಮೂರ್ತಿಯವರ ಒಡೆತನದಲ್ಲಿ ಇದೆ ಹಾಗೂ ಉಳಿದಿದೆಯೆಂದು ಒಮ್ಮೆ ಸಾಬೀತಾದರೆ, ಇದು, ವಾದಿಗಳು ಹಾಗೂ ಪ್ರತಿವಾದಿಗಳ ನಡುವೆ ಪಾಲಾ ಮಾಡ ಬಹುದಾದ ಸ್ವತ್ತಾಗಿದ್ದು ಅದಕ್ಕೆ ಅವರೆಲ್ಲರೂ ಫಲಾನುಭವಿಗಳಾಗುತ್ತಾರೆ.

36. ' ಎ ' ಅನುಸೂಚಿ ಸ್ವತ್ತುಗಳ ಬಾಬು ಸಂ .2 (    ಎ) ಹಾಗೂ (ಸಿ) ಗೆ ಸಂಬಂಧಪಡುವಷ್ಟರಮಟ್ಟಿಗೆ, ಸದರಿ ಸ್ವತ್ತಿನ ಇರುವಿಕೆ ಅಥವಾ ಗುರುತಿಸುವಿಕೆಗೆ ಸಂಬಂಧಿಸಿದ ವಿವರಗಳನ್ನು ನ್ಯಾಯಾಲಯದ ಮುಂದೆ ತಂದಿರುವುದಿಲ್ಲವೆಂಬ ವಿದ್ಯಮಾನವೇ ಮುಂದುವರಿಯುತ್ತದೆ.ಮೊಕದ್ದಮೆಯ ಸದರಿ ಸನ್ನಿವೇಶಗಳಲ್ಲಿ, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, 1 ರಿಂದ 5 ರವರೆಗಿನ ವಾದಿಗಳಿಗೆ ಹಾಗೂ 1 ರಿಂದ 3 ರವರೆಗಿನ ಪ್ರತಿಯೊಬ್ಬ ಪ್ರತಿವಾದಿಗಳಿಗೆ 1/8 ಭಾಗದಷ್ಟು ಭಾಗದ ಹಕ್ಕುಗಳನ್ನು ಗುರುತಿಸಿದ್ದಾರೆ.ಅದೇ ಸಮಯದಲ್ಲಿ, ' ಎ ' ಅನುಸೂಚಿಯ 2 ನೇ ಸಂಖ್ಯೆಯ ಬಾಬಿಗೆ ಸಂಬಂಧಪಡುವಷ್ಟರಮಟ್ಟಿಗೆ, ' ಬಿ ' ಅನುಸೂಚಿ ಸ್ವತ್ತಿನ ಬಾಬುಗಳನ್ನು ಪರಿಗಣಿಸಲಾಗಿದ್ದು ಆ ಕ್ಲೇಮನ್ನು ತಿರಸ್ಕರಿಸಿದ್ದರು.

37. ಪಕ್ಷಕಾರರ ನಡುವಿನ ಪ್ರಮುಖ ವ್ಯಾಜ್ಯಕಾರಣವನ್ನು ' ಎ ' ಅನುಸೂಚಿಯ 2 ನೇ ಸಂಖ್ಯೆಯ ಬಾಬು ಹಾಗೂ ' ಬಿ ' ಅನುಸೂಚಿಯ 1 ರಿಂದ 6 ರವರೆಗಿನ ಸಂಖ್ಯೆಯ ಬಾಬಿಗೆ ಸಂಕ್ಷೇಪಿಸಲಾಗಿದೆ.ಮೇಲೆ ತಿಳಿಸಲಾದ ಹೆಚ್ಚಿನ ಸನ್ನಿವೇಶಗಳಲ್ಲಿ, ' ಎ ' ಅನುಸೂಚಿ ಸ್ವತ್ತಿನ 2 (ಬಿ) ಸಂಖ್ಯೆಯ ಬಾಬು ಸ್ವತ್ತಿನ ಇರುವಿಕೆ ಹಾಗೂ ಒಡೆತನಕ್ಕೆ ಸಂಬಂಧಿಸಿದಂತೆ ಗುರುತಿಸುವಿಕೆಯ ಉದ್ದೇಶಕ್ಕಾಗಿ ಸಂಪೂರ್ಣವಾಗಿ ಖಚಿತರೂಪ ಪಡೆದುಕೊಂಡಿರುವ ಸ್ವತ್ತಾಗಿದೆ.

38. ತೀರ್ಮಾನಿಸಬೇಕಾಗಿದ್ದ ಅಥವಾ ನ್ಯಾಯ ನಿರ್ಣಯ ಮಾಡಬೇಕಾಗಿದ್ದ ಪ್ರಕ್ರಿಯೆಯನ್ನು ಅಥವಾ ಪರಿಗಣನೆಯನ್ನು ಅಧಿವಿಚಾರಣಾ ನ್ಯಾಯಾಲಯ ಅಥವಾ ಸಂದರ್ಭಾನುಸಾರ ಮೊದಲ ಅಪೀಲು ನ್ಯಾಯಾಲಯ ಮಾಡದಿದ್ದಾಗ, ಸಿವಿಲ್ ಪ್ರಕ್ರಿಯಾ ಸಂಹಿತೆಯನ್ನು 23, 23 ಎ ಹಾಗೂ 24 ನೇ ನಿಯಮಗಳ ಹಿನ್ನೆಲೆಯಲ್ಲಿ, ಅಪೀಲನ್ನು ವಿಲೇ ಮಾಡುವುದಕ್ಕೆ ವಿಷಯವನ್ನು ವಹಿಸಿಕೊಂಡಿರುವ ಅಪೀಲು ನ್ಯಾಯಾಲಯಕ್ಕೆ ವಿಷಯವನ್ನು ಕಳುಹಿಸುವ ಅಧಿಕಾರವು ಇರುತ್ತದೆ.ಆದಾಗ್ಯೂ, ಸ್ವಾಭಾವಿಕ ನ್ಯಾಯದ ತತ್ವಗಳ ಉದ್ದೇಶಗಳ ಹೊರತಾಗಿ ಹಾಗೂ ವಿಶ್ವಾಸವನ್ನು ಸಾಕಷ್ಟು ಸಾಕ್ಷ್ಯಾಧಾರ ಲಭ್ಯವಿದ್ದಾಗ ಅಥವಾ ವಸ್ತುಗಳು ಅವುಗಳೇ ಮಾತನಾಡುವಾಗ ಸನ್ನಿವೇಶದ ಹಿನ್ನೆಲೆಯಲ್ಲಿ ಎರಡೂ ಪಕ್ಷಕಾರರಿಗೆ ಯಾವುದೇ ಪೂರ್ವಾಗ್ರಹ ಇಲ್ಲದಿದ್ದಾಗ ಪರಿಗಣನೆಗೆ ಬರುತ್ತಿರುವ ಮೊಕದ್ದಮೆಯ ಅವಧಿ ಹಾಗೂ ಹಂತವನ್ನು

ಪರಿಗಣಿಸುವ ಅಪೀಲು ನ್ಯಾಯಾಲಯದ ವ್ಯಾಪ್ತಿಯೊಳಗೆ ಇದ್ದಾಗ ಅಪೀಲು ನ್ಯಾಯಾಲಯವು, ಅದನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ಕಳಿಸಿದ ಮೇಲೆ ಅದನ್ನು ಹೊರಡಿಸುವ ಬದಲಾಗಿ ವಿಷಯವನ್ನು ವಿಲೇ ಮಾಡಲು ಮುಂದಾಗುತ್ತದೆ.

39. ಹಿಂದೂ ಉತ್ತರಾಧಿಕಾರ ಅಧಿನಿಯಮದ 23 ನೇ ಪ್ರಕರಣಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಸದರಿ ಪ್ರಕರಣವನ್ನು, 2005 ನೇ ವರ್ಷದ ಅವಧಿಯಲ್ಲಿ ಅಧಿನಿಯಮವನ್ನು ತಿದ್ದುಪಡಿ ಮಾಡುವ ಮೂಲಕ ತೆಗೆದುಹಾಕಲಾಗಿತ್ತು ಹಾಗೂ ಅದು ಭವಿಷ್ಯವರ್ತಿ ಸ್ವರೂಪದ್ದಾಗಿದೆಯೆಂಬುದನ್ನು ಸೂಚಿಸುವುದು ಅಗತ್ಯವಾಗಿರುತ್ತದೆ.ದಾವೆಯನ್ನು 1999 ನೇ ವರ್ಷದಲ್ಲಿ ಸಲ್ಲಿಸಲಾಗಿತ್ತು.ಸಂಗತಿಯ ಹಿನ್ನೆಲೆಯಲ್ಲಿ 2 ನೇ ಪ್ರತಿವಾದಿ-ಬಿ.ಕೆ.ಶ್ರೀನಿವಾಸ್ ರವರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, 1989 ಕ್ಕೆ ಮೊದಲು ಹೆಣ್ಣು ಮಕ್ಕಳು ವಿವಾಹವಾಗಿರುವ ಕಾರಣದಿಂದ ವಾಸಿಸುತ್ತಿರುವ ಮನೆಯಲ್ಲಿ ಪಾಲು ಪಡೆಯಲು ಸಾಧ್ಯವಾಗುವುದಿಲ್ಲವೆಂದು ನಿವೇದಿಸಿದ್ದಾರೆ.

40. ಹಿಂದೂ ಉತ್ತರಾಧಿಕಾರ ಅಧಿನಿಯಮ, 1956 ರ 23 ನೇ ಪ್ರಕರಣದ ಹೆಚ್ಚಿನ ಕಾನೂನು ಪರಿಣಾಮದ ಗ್ರಹಿಕೆಯಲ್ಲಿ, ವಿವಾಹಿತ ಹೆಣ್ಣುಮಕ್ಕಳಿಗೆ ವಾಸಿಸುತ್ತಿರುವ ಮನೆಯಲ್ಲಿ ಪಾಲು ಪಡೆಯುವ ಕ್ಲೇಮನ್ನು ಮಾಡಬೇಕಾದ ವಿಭಜನೆಯ ಹಕ್ಕುಗಳನ್ನು ಸಂಪೂರ್ಣವಾಗಿ ತೆಗೆದುಹಾಕಲಾಗುವುದಿಲ್ಲ.ಸ್ವತ್ತುಗಳ ಉತ್ತರಾಧಿಕಾರವು, ಉಯಿಲಿನಿಂದ ಅಥವಾ ಉಯಿಲಿಲ್ಲದೆ ಬರುತ್ತದೆ.ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಕ್ರೋಢೀಕರಣ ಅಥವಾ ಕ್ರೋಢೀಕರಣವಿಲ್ಲದೆ ಇರಲಿ ಆದರೆ, ಉಯಿಲು ಇಲ್ಲದೆ ತೀರಿಕೊಂಡ ಹಿಂದೂ ಪುರುಷನ ವಿವಾಹಿತ ಹೆಣ್ಣು ಮಕ್ಕಳು, ಇತರ ಬಾಧ್ಯಸ್ಥ ಗಂಡುಮಕ್ಕಳ ಸ್ವಾಧೀನದಲ್ಲಿರುವ ವಾಸ ಮಾಡುತ್ತಿರುವ ಮನೆಯ ಸಂಬಂಧದಲ್ಲಿ ಪಾಲನ್ನು ಕೋರಲು ಹಕ್ಕುಳ್ಳವರಾಗಿರುವುದಿಲ್ಲ ಎಂಬುದನ್ನು ಏಕಕಾಲದಲ್ಲಿ ಇಬ್ಬರಿಗೂ ಅನ್ವಯಿಸಲು ಸಾಧ್ಯವಾಗುವುದಿಲ್ಲ.

ವಾಸದ ಮನೆಯಲ್ಲಿ ಪಾಲನ್ನು ಕ್ಲೇಮು ಮಾಡಲಾಗದ ಉಯಿಲು ಮಾಡದೆ ಮೃತರಾದ ಹಿಂದೂ ಪುರುಷನ ವಿವಾಹಿತ ಹೆಣ್ಣು ಮಕ್ಕಳು, ಅಂಥ ಸ್ವತ್ತನ್ನು ವಿಭಾಗಿಸಲು ಅಥವಾ ಭಾಗ ಮಾಡಲು ಪುರುಷ ವಾರಸುದಾರರು ಆಯ್ಕೆ ಮಾಡಿಕೊಳ್ಳುವವರೆಗೆ ಭಾಗ ಅಥವಾ ಸಂದರ್ಭಾನುಸಾರ ಬಿಡುಗಡೆಯನ್ನು ಕೇಮು ಮಾಡುವ ಮೂಲಕ ಆದ್ಯತೆಯ ಅವಶ್ಯಕತೆಯಿಂದ ಹೊರಗುಳಿದಿದ್ದಾಳೆ.ಹಾಗೆಯೇ, ಉಯಿಲು ಮಾಡದೆ ಮರಣ ಹೊಂದಿರುವ ಅಂಥ ಹಿಂದೂ ಪುರುಷನ ವಿವಾಹಿತ, ಹೆಣ್ಣು ಮಕ್ಕಳು ವಿವಾಹ ವಿಚ್ಛೇದಿತೆ ಅಥವಾ ಗಂಡನಿಂದ ಪರಿತ್ಯಕ್ತೆ ಅಥವಾ ವಿಧವೆಯಾಗಿದ್ದರೆ, ಅಂಥ ಸ್ವತ್ತುಗಳಲ್ಲಿ ವಾಸದ ಮನೆಯನ್ನು ಕ್ಲೇಮು ಮಾಡುವ ಹಕ್ಕಿನಿಂದ ವಂಚಿತರಾಗುವುದಿಲ್ಲ.ಈ ನಿರ್ಬಂಧವು, ಪಾಲಿನಲ್ಲಿ ಕ್ಲೇಮು ಮಾಡಲು ಅವಿವಾಹಿತ ಹೆಣ್ಣು ಮಕ್ಕಳ ಹಕ್ಕುಗಳನ್ನು ಬುಡಮೇಲು ಮಾಡುವುದಿಲ್ಲ.ಪುರುಷ ವಾರಸುದಾರರು ವಿಭಜನೆಯನ್ನು ಮಾಡುವುದನ್ನು ಅಯ್ಕೆ ಮಾಡಿಕೊಂಡಾಗ ಇದಕ್ಕೆ ಬಲಬರುತ್ತದೆ.

41. ಮೇಲಿನ ಸನ್ನಿವೇಶಗಳಲ್ಲಿ ಒಡಹುಟ್ಟಿದ ಪ್ರತಿವಾದಿಸಂಖ್ಯೆ: 1 ಬಿ.ಕೆ. ಗಣೇಶ್, ವಿವಾಹಿತ ಹೆಣ್ಣು ಮಕ್ಕಳನ್ನು ಒಳಗೊಂಡಂತೆ ವಾದಿಗಳ ನಡುವೆ ಸ್ವತ್ತನ್ನು ವಿಭಜನೆ ಮಾಡುವುದು ತನಗೆ ಅಂಗೀಕಾರಾರ್ಹವೆಂದು ಮತ್ತು ಸ್ವಾಗತಿಸುತ್ತೇನೆಂದು ತನ್ನ ಉದ್ದೇಶವನ್ನು ಖಚಿತಪಡಿಸಲು ಹಾಗೂ ದೃಢಪಡಿಸಲು ದಾಖಲಿಸಿದ್ದಾನೆಂಬುದನ್ನು ಮರೆಯಲು ಸಾಧ್ಯವಿಲ್ಲ.ಅಷ್ಟೇ ಅಲ್ಲದೆ, ಪಾಲು ಮಾಡುವಿಕೆಯ ಕಾಯಕವು,

ವಾದಿಗಳ ಕ್ಲೇಮಿನ ಮೇಲಷ್ಟೇ ಅಲ್ಲದೆ, ಕ್ಷೇತ್ರ ಅಫಿಡವಿಟ್ಟೂ್ನ್ನ ಸಹ ಹೊಂದಿರುವ ಸದರಿ ಪ್ರತಿವಾದಿ ಸಂ .1 ಬಿ.ಕೆ. ಗಣೇಶ್ ಮಾಡಿದ ಅಂಶವನ್ನೂ ಸಹ ಆಧರಿಸಿದೆ.

42. ಹಕ್ಕುಗಳ ಚಲಾವಣೆಯನ್ನು ಮುಂದೂಡುವಿಕೆಗೆ ಕೊನೆಯೆಂಬುದಿರುವುದಿಲ್ಲ.ಈ ಸಂಬಂಧದಲ್ಲಿ, ವಾದಿ ಸಂ .5 ತೇಜಸ್ವಿ ರಘು ಎಂಬುವರು ದಿವಂಗತ ಬಿ.ಆರ್. ಕೃಷ್ಣಮೂರ್ತಿರಾವ್ರವರ ಮೃತ ಮಗಳಾದ ನಾಗರತ್ನರವರ ಮಗನಾಗಿದ್ದಾನೆ.ಹೀಗಾಗಿ, ಪುರುಷ ವಾರಸುದಾರರನ್ನೂ ಹೆಣ್ಣು ಮಕ್ಕಳ ವಾರಸುದಾರಿಕೆಯೊಂದಿಗೆ ಸಹ ವಾದಿಯ ಕೇಮಿನಲ್ಲಿ ಸೇರಿಸಲಾಗಿದೆ.

43. ಮೊಕದ್ದಮೆಯ ಒಟ್ಟಾರೆ ಸನ್ನಿವೇಶಗಳಲ್ಲಿ, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ' ಎ ' ಅನುಸೂಚಿ ಸ್ವತ್ತಿನ 1 ನೇ ಸಂಖ್ಯೆಯ ಬಾಬ್ತಿಗೆ ಸಂಬಂಧಿಸಿದಂತೆ ವಾದಿಗಳ ಬೇಡಿಕೆಯನ್ನು ನಿರ್ಧರಿಸುವಲ್ಲಿ ಹಾಗೂ ಪ್ರತಿಯೊಬ್ಬ ಪಕ್ಷಕಾರರಿಗೆ 1/ 8 ಭಾಗವನ್ನು ನೀಡುವಲ್ಲಿ ಸರಿಯಾಗಿದ್ದರೂ ಕೂಡ, ಸ್ವತ್ತುಗಳ ಗುರುತಿಸುವಿಕೆಗೆ ಸಂಬಂಧಿಸಿದಂತೆ ಅದಕ್ಕಿಂತ ಹೆಚ್ಚಾಗಿ, ' ಎ ' ಅನುಸೂಚಿ ಸ್ವತ್ತಿನ 2 (ಬಿ) ಬಾಬ್ತನ್ನು ಗುರುತಿಸುವುದನ್ನು ಅದರಲ್ಲೂ ವಿಶೇಷವಾಗಿ, ನಿಶಾನೆ ಪಿ .5 ಹಾಗೂ ಪಿ .6 ರ ಮೂಲಕ ವಾದಿಯು ಸುಳಿವು ನೀಡಿದ್ದಾಗ, ಅದಕ್ಕೆ ಗಮನ ನೀಡದೆ ಲೋಪವೆಸಗಿದ್ದಾರೆ.

44. ಅಷ್ಟೇ ಅಲ್ಲದೆ, ವಾದಿ ಸಂ .5 ಶ್ರೀ ವಿಕ್ರಮ್ ಪಡೆಯವರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಸ್ವತ್ತಿನ ಮತ್ತೊಂದು ಬಾಬು ಲಭ್ಯವಿರುವುದಕ್ಕೆ ಸಂಬಂಧಿಸಿದಂತೆ ಪ್ರತಿವಾದಿ ತಕರಾರು ಮಾಡುವ ಮೂಲಕ ಪ್ರಾ.ಸಾ .1 ಕ್ಕೆ ಪ್ರಶ್ನೆಯನ್ನು ಒಡ್ಡಿದ್ದು, ಇದಕ್ಕೆ ಪ್ರಾ.ಸಾ .1 ಪಾಟೀ ಸವಾಲಿನ ಅವಧಿಯಲ್ಲಿ ಅ ಸಕಾರಾತ್ಮಕವಾಗಿ ಉತ್ತರಿಸಿರುವರೆಂದು ನಿವೇದಿಸಿದ್ದಾರೆ.

45. ಮೇಲೆ ತಿಳಿಸಲಾದಂತೆ, 6 ' ಎ ' ಅನುಸೂಚಿ ಸ್ವತ್ತಿನ 2 (ಬಿ) ಸಂಖ್ಯೆಯ ಬಾಬಿಗೆ ಸಂಬಂಧಪಟ್ಟಂತೆ ನಿರ್ಣಯವನ್ನು ದಾಖಲಿಸುವ ಸಂಬಂಧದಲ್ಲಿ ಅಧಿವಿಚಾರಣಾ ನ್ಯಾಯಾಧೀಶರು, ಲೋಪವೆಸಗಿರುವರೆಂಬ ನಿರ್ಧಾರಕ್ಕೆ ನಾನು ಬಂದಿರುತ್ತೇನೆ.ಉಳಿದ ಭಾಗದ ನಿರ್ಣಯಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಹೊರಡಿಸಿದ ತೀರ್ಪಿಗೆ ಹಾಗೂ ಡಿಗ್ರಿಗೆ ನನ್ನ ಸಹಮತವಿರುತ್ತದೆ.

46. ಆರ್ಎಫ್ ಸಂ .450/2009 ಕ್ಕೆ ಸಂಬಂಧಪಡುವಷ್ಟರಮಟ್ಟಿಗೆ 2 ಹಾಗೂ 3 ನೇ ಸಂಖ್ಯೆಯ ಪ್ರತಿವಾದಿಗಳು ತೀರ್ಪು ಹಾಗೂ ಡಿಕ್ರಿಯನ್ನು ತಳ್ಳಿಹಾಕುವಂತೆ ಕೋರಿ ಇದನ್ನು ಸಲ್ಲಿಸಿದ್ದಾರೆ ಹಾಗೂ ವಜಾಗೊಳಿಸಲು ಅರ್ಹವಾಗಿರುತ್ತದೆ.

47. ಆದುದರಿಂದ ಈ ಮುಂದಿನ ಆದೇಶವನ್ನು ನಾನು ಹೊರಡಿಸಿದ್ದೇನೆ.

ಆದೇಶ

ಅಧಿವಿಚಾರಣಾ ನ್ಯಾಯಾಧೀಶರು ಮೂಲದಾವೆ ಸಂ .7651/1999 ರಲ್ಲಿ ಹೊರಡಿಸಿದದಿನಾಂಕ: 6.01.2009 ರ ತೀರ್ಪು ಹಾಗೂ ಡಿಕ್ಕಿಯನ್ನು ದೃಢೀಕರಿಸಿ, ಆರ್ಎಫ್ಎಸಂಖ್ಯೆ: 450/2009 ನ್ನು ವಜಾಗೊಳಿಸಲಾಗಿದೆ.

ಆರ್ಎಫ್ಎ ಸಂ .1582/2010 ನ್ನು ಪುರಸ್ಕರಿಸಲಾಗಿದೆ. 'ಎ ' ಅನುಸೂಚಿ ಸ್ವತ್ತಿನ ಸಂ .2 (ಬಿ) ಬಾಬಿನ ಮಟ್ಟಿಗೆ ಅಧಿವಿಚಾರಣಾ ನ್ಯಾಯಾಧೀಶರು ಮೂಲ ದಾವೆ ಸಂ .7651/1999 ರಲ್ಲಿ ಹೊರಡಿಸಿದದಿನಾಂಕ: 06.01.2009 ರ ತೀರ್ಪು ಹಾಗೂ ಡಿಕ್ಕಿಯನ್ನು ತಳ್ಳಿಹಾಕಲಾಗಿದೆ.ತತ್ಪರಿಣಾಮವಾಗಿ, ಮೂಲದಾವೆ ಸಂ .7651/1999 ರಲ್ಲಿನ

ವಾದಿಗಳ ದಾವೆಯನ್ನು, ' ಎ ' ಅನುಸೂಚಿ ಸ್ವತ್ತಿನ 1 ನೇ ಸಂಖ್ಯೆಯ ಬಾಬ್ತೆನೊಟ್ಟಿಗೆ ಭಾಗ ಮಾಡುವುದಕ್ಕಾಗಿ ' ಎ ' ಅನುಸೂಚಿ ಸ್ವತ್ತಿನ 2 (ಬಿ) ಸಂಖ್ಯೆಯ ಬಾಬನ್ನು ಒಳಗೊಳ್ಳಲು ಭಾಗಶಃ ಡಿಗ್ರಿಗೊಳಿಸಲಾಗಿದೆ, ಆ ಮೂಲಕ ವಾದಿಗಳು ಪ್ರತಿಯೊಬ್ಬರೂ 1/8 ಭಾಗಕ್ಕೆ ಹಕ್ಕುಳ್ಳವರಾಗಿರುವರು.

' ಎ ' ಅನುಸೂಚಿ ಸ್ವತ್ತಿನ 2 (   ಎ) ಹಾಗೂ (ಸಿ) ಬಾಬು ಹಾಗೂ ' ಬಿ ' ಅನುಸೂಚಿ ಸ್ವತ್ತಿನ 1 ರಿಂದ 6 ರ ವರೆಗಿನ ಸಂಖ್ಯೆಯ ಬಾಬುಗಳಿಗೆ ಸಂಬಂಧಪಟ್ಟಂತೆ ಹೊರಡಿಸಿದ ಉಳಿದಿರುವ ತೀರ್ಪು ಹಾಗೂ ಡಿಕ್ರಿಯನ್ನು ದೃಢೀಕರಿಸಲಾಗಿದೆ.

ತದನುಸಾರವಾಗಿ ಪೂರ್ವಭಾವಿ ಡಿಕ್ಕಿಯನ್ನು ಮಾಡಲಾಗಿದೆ.ಯಾವುದೇ ವೆಚ್ಚವಿರುವುದಿಲ್ಲ.